ಅಸಲು ದಾವಾ ನಂಃ 09/2022
ಪಿ ಡಬ್ಲ್ಯುಃ1

<u>ದಿನಾಂಕಃ **30.01.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಪಿ ಡಿ ವಕೀಲರಿಂದಃ</u>

ನಾನು ಮತ್ತು ನನ್ನ ಪತ್ನಿ ಇಬ್ಬರು ವೃತ್ತಿಯಲ್ಲಿ ವೆಧ್ಯರು ಇರುತ್ತೇವೆ ಎಂದರೆ ಸರಿ. ನಾವು 1999 ರಿಂದ ವೈಧ್ಯರಾಗಿ ಸೇವೆ ಸಲ್ಲಿಸುತ್ತಾ ಇರುತ್ತೇವೆ. ನಾನು ಹರಿಹರಪುರದಲ್ಲಿ ದಾವಾ ಆಸ್ತಿಗಳನ್ನು ಹೊರತುಪಡಿಸಿ ನನಗೆ ಇರುವ ಆಸ್ತಿ ಸರ್ವೆ ನಂಬರ್, ಚೆಕ್ಕುಬಂಧಿ ಹಾಗೂ ವಿಸ್ತೀರ್ಣದ ಬಗ್ಗೆ ಈ ದಾವೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಹರಿಹರಪುರದಲ್ಲಿ ನನ್ನ ಹೆಸರಿನಲ್ಲಿ ಆಸ್ತಿ ಇರುವ ಸಂಬಂಧ ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿಗೂ ಮತ್ತು ನಮ್ಮ ಆಸ್ತಿಯ ಚೆಕ್ಕುಬಂಧಿಗುಾ ಸಾಮ್ಯತೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವೆರದು ನಮ್ಮ ಪಕ್ಕದ ಜಮೀನು ಇರುತ್ತದೆ ಎಂದು ಉತ್ತರಿಸುತ್ತಾರೆ.

2. ಸರ್ವೆ ನಂಬರ್ 187/1 ವಿಸ್ತೀರ್ಣ ಒಂದು ಎಕರೆ 12 ಗುಂಟೆ ಹಾಗೂ ಸರ್ವೆ 187/2 ವಿಸ್ತೀರ್ಣ 1 ಎಕರೆ 10 ಗುಂಟೆ ಇರುತ್ತದೆ. ದಾವಾ ಸ್ವತ್ತು 1 ಜೆ ಎಲ್ ಹಿರಿಯಣ್ಣ ಇವರ ಹೆಸರಿನಲ್ಲಿ ಖಾತೆ ಇದ್ದು ಹಾಗೂ ದಾವಾ ಸ್ವತ್ತು 2 ಜೆ ಎಲ್ ಬಾಲಕೃಷ್ಣ ಇವರ ಹೆಸರಿನಲ್ಲಿ ಖಾತೆ ಇರುತ್ತೆ ಎಂದರೆ ಸರಿ. ಸರ್ವೆ ನಂಬರ್ 187/1 ಮತ್ತು ಸರ್ವೆ ನಂಬರ್ 187/2 ಪೋಡಾಗಲೀ ಅಥವಾ ಹದ್ದುಬಸ್ತಾಗಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.ದಾವಾ ಆಸ್ತಿಗಳಲ್ಲಿ ರಬ್ಬರ್ ಮತ್ತು ಅಡಿಕೆ ಬೆಳೆ ಫಸಲು ಇರುತ್ತದೆ ಎಂದರೆ ಸರಿ. ದಿನಾಂಕ 14.05.2018 ರಂದು ಜೆ ಎಲ್ ಹಿರಿಯಣ್ಣ ಭಟ್ ಹಾಗೂ ಜೆ ಎಲ್ ಬಾಲಕೃಷ್ಣ ಇವರ ಕಡೆಯಿಂದ ಪ್ರತಿವಾದಿ ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಕ್ರಯ ಪತ್ರದ ಆಧಾರದ ಮೇಲೆ ಪ್ರತಿವಾದಿಯ ಹೆಸರಿಗೆ ಖಾತೆ ಮತ್ತು ಪಹಣಿ ಆಗಿರುತ್ತದೆ ಎಂದರೆ ಸರಿ.

3. ನಾನು ದಿನಾಂಕ 14.05.2018 ರ ಕ್ರಯ ಪತ್ರವನ್ನು ಓದಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ದಾವಾ ಸ್ವತ್ತುಗಳು ಹಕ್ಕು ಮತ್ತು ಸ್ವಾಧೀನವನ್ನು ಕೊಟ್ಟಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದ ನಾವು ಸ್ವಾಧೀನದಲ್ಲಿ ಇರುತ್ತೇವೆ ಎಂದು ಉತ್ತರಿಸುತಾರೆ. ದಾವಾ ಆಸ್ತಿಗಳಲ್ಲಿ ನಾವು ಸ್ವಾಧೀನ ಇರುವ ಬಗ್ಗೆಯಾವುದೇ ದಾಖಲೆ

ಇರುವುದಿಲ್ಲ ಸಾಕ್ಷಿ ಮುಂದುವರೆದು ನಾವು ಖರೀದಿಸುವ ಕಾಲಕ್ಕೆ ಖರಾಬು ಜಾಗ ಎಂದು ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ಮಾಡಿಕೊಂಡ ಕ್ರಯದ ಕರಾರು ಪತ್ರದಲ್ಲಿ ದಾವಾ ಆಸ್ತಿಗಳು ಖರಾಬು ಜಾಗ ಎಂದು ನಮೂದು ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಹರಿಹರಪುರದಲ್ಲಿ ಒಂದು ಜಮೀನನ್ನು ಅಪ್ಪಲ ಸೋಮರಾಜು ಇವರ ಕಡೆಯಿಂದ 2008 ರಲ್ಲಿ ಖರೀದಿ ಮಾಡಿರುತ್ತೇವೆ. 2008 ರ ಕ್ರಯ ಪತ್ರದಲ್ಲಿ ದಾವಾ ಆಸ್ತಿಯನ್ನು ಸ್ವಾಧೀನ ಕೊಟ್ಟ ಬಗ್ಗೆ ನಮೂದು ಮಾಡಿರುವುದಿಲ್ಲ. ವಾದ ಪತ್ರದಲ್ಲಿ ಪ್ಯಾರ ನಂಬರ್ 3 ರಲ್ಲಿ ಬರೆಸಿದ ವಿಚಾರ ಸರಿ ಇರುತ್ತದೆ. ನಮಗೆ ಮಾರಟ ಮಾಡಿದ ಜಮೀನಿನ ಮಾಲೀಕರಿಗೆ ದಾವಾ ಆಸ್ತಿಗಳನ್ನು ಸ್ವಾಧೀನ ಬಿಟ್ಟು ಕೊಟ್ಟಿರುವುದಿಲ್ಲ ಹಾಗೂ ಸದರಿಯವರಿಗೆ ದಾವಾ ಆಸ್ತಿಗಳ ಸಂಬಂಧ ನನಗೆ ಸ್ವಾಧೀನ ಬಿಟ್ಟು ಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

4. ನಾನು ಈ ದಾವೆಯಲ್ಲಿ ದಾವಾ ಆಸ್ತಿಗಳ ಸಂಬಂಧ ಸ್ವಾಧೀನ ಕೋರಿ ಪರಿಹಾರ ಕೇಳಿರುವುದಿಲ್ಲ ಎಂದರೆ ಸಾಕ್ಷಿ ನಾವೆ ಸ್ವಾಧೀನದಲ್ಲಿ ಇದ್ದೇವೆ ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 187/1 ಹಾಗೂ ಸರ್ವೆ ನಂಬರ್ 187/2 ಹಿಂದಿನ ಮಾಲೀಕರಾದ ಹಿರಿಯಣ್ಣ ಭಟ್ ಮತ್ತು ಬಾಲಕೃಷ್ಣ ನಮಗೆ ಸ್ವಾಧೀನ ಕೊಟ್ಟಿರುವುದಿಲ್ಲ ಎಂದರೆ ಸರಿ. ನಾವು ಈ ಹಿಂದೆ ಖರೀದಿಸಿದ ಅಪ್ಪಲ ಸೋಮರಾಜು ಇವರಿಗೆ ಯಾವುದೇ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮತ್ತು ನಾನು ಹಿಂದೆ ಖರೀದಿಸಿದ ಆಸ್ತಿ ಬೇರೆ ಬೇರೆ ಇರುತ್ತದೆ ಎಂದು ಸಾಕ್ಷಿ ಒಂದೇ ಬೌಂಡರಿಯಲ್ಲಿ ಬರುತ್ತದೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿ ಮತ್ತು ನಾನು ಖರೀದಿಸಿದ ಆಸ್ತಿಯ ಬೌಂಡರಿ ಒಂದೇ ಇರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿಪಿ- 1 ರ ಖಂಡಿಕೆ 12 ರಲ್ಲಿ ದಾವಾ ಆಸ್ತಿಯ ಸ್ವಾಧೀನ ಮೂಲ ಮಾಲೀಕರ ಬಳಿಯೇ ಇದ್ದು ನಮಗೆ ಸ್ವಾಧೀನ ಕೊಟ್ಟ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಮೌಲ್ಯ ಎಕರೆಗೆ ಎಷ್ಟು ಹಣ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಟ್ಟಾಗಿ ಖರೀದಿಸಿರುತ್ತೇವೆ ಎಂದು ಉತ್ತರಿಸುತ್ತಾರೆ.ದಾವಾ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಎಂದು ನನಾ ವಿಚಾರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಮಾರುಕಟ್ಟೆ ಬೆಲೆಗಿಂತ

ಹೆಚ್ಚಿನ ಹಣ ಕೊಟ್ಟು ಖರೀದಿಸಿರುತ್ತೇವೆ ಎಂದು ಉತ್ತರಿಸುತ್ತಾರೆ. ನಿಪಿ- 1 ರ ಚೆಕ್ಕುಬಂಧಿಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಯಾವ ಕಾರಣಕ್ಕಾಗಿ ಚೆಕ್ಕುಬಂಧಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ನಕಾಶೆಯ ಪ್ರಕಾರ ಇರುವ ಕಾರಣ ನಮೂದಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯ ಸಂಬಂಧ ಪೋಡು ಮತ್ತು ದುರಸ್ತು ಆಗದ ಕಾರಣ ನಾಕಶೆ ಇರುವುದಿಲ್ಲ ಎಂದರೆ ಸಾಕ್ಷಿ ನಕಾಶೆ ಇರುತ್ತದೆ ಎಂದು ಉತ್ತರಿಸುತ್ತಾರೆ. ನನಗೆ ನಕಾಶೆ ಆಧಾರದ ಮೇಲೆ ದಾವಾ ಆಸ್ತಿಯ ಚೆಕ್ಕು ಬಂಧಿಗಳನ್ನು ಸರಿಯಾಗಿ ನೆನಪಿರುವುದಿಲ್ಲ.

6. ನಿಪಿ- 1 ಕರಾರು ಪತ್ರವನ್ನು ವಕೀಲರೆ ತಯಾರಿಸಿರುತ್ತಾರೆ ಎಂದರೆ ಸರಿ. ನಾನು ದಾವಾ ಆಸ್ತಿಯ ಸಂಬಂಧ ಪ್ರತಿವಾದಿ ಮತ್ತು ಅವರ ತಂದೆಯ ಮೇಲೆ 2 ದಾವೆಗಳನ್ನು ಹೂಡಿರುತ್ತೇವೆ ಎಂದರೆ ಸರಿ. ನಿಪಿ- 1 ಪುಟ ಸಂಖ್ಯೆ 1 ರ ಕೊನೆಯ ಪ್ಯಾರಾದಲ್ಲಿ ನಮೂದಿಸಿದ ವಿಚಾರ ಸರಿಯಾಗಿ ಇರುತ್ತದೆ ಎಂದರೆ ಸರಿ. ಪ್ರತಿವಾದಿ ಮತ್ತು ಅವರ ತಂದೆ ಶ್ರೀಮಂತರು ಇರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ಸದರಿಯವರಿಗೆ ಯಾವತ್ತೂ ಆರ್ಥಿಕ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಮತ್ತು ಅವರ ತಂದೆಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಪ್ರಮೇಯ ಇರಲಿಲ್ಲ ಎಂದರೆ ಸಾಕ್ಷಿ ದಾವಾ ಆಸ್ತಿಯಲ್ಲಿ ನಮ್ಮ ಬೌಂಡರಿಯಲ್ಲಿ ಬರುವ ಕಾರಣ ಮಾರಾಟ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಮತ್ತು ಅವರ ತಂದೆ ಯಾವತ್ತ್ತಾ ದಾವಾ ಆಸ್ತಿಗಳನ್ನು ಮಾರಾಟ ಮಾಡುತ್ತೆವೆ ಎಂದು ಪ್ರಚಾರ ಪಡಿಸಿರುವುದಿಲ ಎಂದರೆ ಸರಿಯಲ್ಲ.

7. ನಾವುಆಸ್ತಿಯನ್ನು ಖರೀದಿಸುವ ಕಾಲಕ್ಕೆ Karnataka Land Reforms ಕಾಯ್ದೆಯಲ್ಲಿ ಇಂತಿಷ್ಟೇ ವರಮಾನ ಇರುವವರು ಖರೀದಿಸಬೇಂದು ಷರತ್ತು ಇರಲಿಲ್ಲ. ಕ್ರಯದ ಕರಾರು ಪತ್ರ ಆಗುವ ಕಾಲಕ್ಕೆ ಪ್ರತಿವಾದಿಯ ಕುಟುಂಬದ ವಂಶವೃಕ್ಷ, ಪಹಣಿ ಹಾಗೂ ನಕಾಶೆ ಎಲ್ಲಾ ದಾಖಲೆಗಳನ್ನು ನೋಡಿ ಮಾತುಕತೆಯಾಗಿರುತ್ತದೆ. ನಿಪಿ- 1 ರ ಖಂಡಿಕೆ 3 ರಲ್ಲಿ ನಮೂದಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ನನಗೆ ತೃಪ್ತಿಕರ ಎನಿಸಿದ ನಂತರ ನಾನು ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿ.ಕ್ರಯದ ಕರಾರು ಪತ್ರ

ಆಗುವ ಕಾಲಕ್ಕೆ ಸ್ವತ್ತಿನ ಋಣಭಾರ ರಾಹಿತ್ಯಾ ಪ್ರಮಾಣ ಪತ್ರ ನೋಡಿದ್ದೀರ ಎಂದರೆ ಸಾಕ್ಷಿ ಸರಿಯಾಗಿ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ.

8. ಕ್ರಯದ ಕರಾರು ಪತ್ರದ ಮಾತುಕತೆ ಕೊಪ್ಪದ ಮೂಡಣ ಮನೆಯ ಹೋಂ ಸ್ಟೇ ಬಳಿ ಆಗಿರುತ್ತದೆ. ಆ ದಿನ ಯಾವುದೇ ಬರವಣಿಗೆ ಆಗಿರುವುದಿಲ್ಲ. ಪ್ರತಿವಾದಿಯ ತಂದೆ ಇವರಿಗೆ ವಯಸ್ಸಾಗಿ ಅನಾರೋಗ್ಯದಿಂದ ಇರುವ ಕಾರಣ ಅವರು ನ್ಯಾಯಾಲಯಕ್ಕೆ ಬರುತ್ತಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ 29.04.2019 ರಂದು ಕೆ ಎನ್ ಸುಧೀರ್ ವಕೀಲರ ಕಛೇರಿಯಲ್ಲಿ ಕ್ರಯದ ಕರಾರು ಪತ್ರ ಪ್ರತಿವಾದಿ ಮತ್ತು ಅವರ ತಂದೆ ಸಮಕ್ಷಮ ಆಗಿರುತ್ತದೆ. ಕ್ರಯದ ಕರಾರು ಪತ್ರ ತಯಾರಿಸಲು ಪ್ರತಿವಾದಿ, ಅವರ ತಂದೆ ಮತ್ತು ನಾನು ಎಲ್ಲರೂ ಸೇರಿ ಮಾಹಿತಿ ಕೊಟ್ಟಿರುತ್ತೇವೆ. ಆ ದಿನ ಸುಧೀರ್ ವಕೀಲರು ಕ್ರಯದ ಕರಾರು ಪತ್ರದ ಡ್ರಾಫ್ಟ್ ಒಕ್ಕಣೆಯನ್ನು ಮಾಡಿರುತ್ತಾರೆ. ಅದಕ್ಕೆ ನನ್ನ ಮತ್ತು ಪ್ರತಿವಾದಿಯ ಸಹಿಯನ್ನು ಪಡೆದಿರುತ್ತಾರೆ. ಸದರಿ ಕರಡು ಕ್ರಯದ ಕರಾರು ಪತ್ರ ಇರುವುದಿಲ್ಲ. ಸಾಕ್ಷಿ ಮುಂದುವರೆದ ನೇರವಾಗಿ ಕ್ರಯದ ಕರಾರು ಪತ್ರವನ್ನು ತಯಾರಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಪಿ- 1 ರ ಚಾಪಾ ಕಾಗದವನ್ನು ನಾನೆ ಖರೀದಿಸಿರುತ್ತೇನೆ. ನಿಪಿ- 1 ರ ಒಕ್ಕಣೆಯನ್ನು ಸುಧೀರ್ ವಕೀಲರ ಕಛೇರಿಯಲ್ಲಿ ಟೈಪ್ ಮಾಡಲಾಗಿರುತ್ತದೆ.

9. ನಿಪಿ- 1 ರಲ್ಲಿ ಸದರಿ ಕ್ರಯದ ಕರಾರು ಪತ್ರವನ್ನು ಯಾರು ಟೈಪ್ ಮಾಡಿರುತ್ತಾರೆ ಎಂಬುದರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ- 1 ನ್ನು ತಯಾರಿಸುವ ಕಾಲಕ್ಕೆ ಪ್ರತಿವಾದಿ ಮತ್ತು ಅವರ ತಂದೆ ಹಾಜರಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀ ಎಂದರೆ ಸರಿಯಲ್ಲ. ದಿನಾಂಕ 29.04.2019 ರಂದು ಆ ದಿನ ಪ್ರತಿವಾದಿ ಕೊಪ್ಪ ದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ- 1 ರಲ್ಲಿರುವ ಪ್ರತಿವಾದಿಯ ಸಹಿಯನ್ನು ನಾವು ಫೋರ್ಜರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿ 2 ರವರಿಗೆ ಆರೋಗ್ಯ ಸರಿ ಇಲ್ಲದೇ ಇರುವುದನ್ನು ದುರುಪಯೋಗ ಪಡಿಸಿಕೊಂಡು ಅವರಿಗೆ 1 ಚೆಕ್ಕನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಪಿ- 1 ರ ಖಂಡಿಕೆ 12 ರಲ್ಲಿ ಬರೆದ ವಿಚಾರ ಸರಿಯಾಗಿರುತ್ತದೆ ಎಂದರೆ ಸರಿ. ಇಲ್ಲಿಯವರೆಗೂ ಪಂಚಾಯ್ತಿದಾರರು ನನಗಾಗಲೀ ಮತ್ತು ಪ್ರತಿವಾದಿ ಮತ್ತು ಅವರ ತಂದೆಗಾಗಲೀ ನೋಟೀಸು ಕೊಟ್ಟಿರುವುದಿಲ್ಲ ಮತ್ತು ಅಳತೆ

ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಪಂಚಾಯ್ತುದಾರರು ನೋಟೀಸು ಕೊಟ್ಟು ಅಳತೆ ಮಾಡಿರುತ್ತಾರೆ ಎಂದು ನನಗೆ ಈಗ ಹೇಳಲು ಸರಿಯಾಗಿ ನೆನಪಿರುವುದಿಲ್ಲ. ಯಾವುದೇ ಪಂಚಾಯ್ತಿ ಆಗಿರುವುದಿಲ್ಲ ಮತ್ತು ಅಳತೆ ಕಾರ್ಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಳತೆ ಮತ್ತು ಪೋಡಿ ಮಾಡದೇ ಇರುವುದಿಂದ ಚೆಕ್ಕುಬಂಧಿ ನಿರ್ಧಿಷ್ಟವಾಗಿ ತೋರಿಸಲು ಆಗುವುದಿಲ್ಲ ಎಂದು ನಕಾಶೆಯ ಪ್ರಕಾರ ಎಂದು ಚೆಕ್ಕುಬಂಧಿ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ- 1 ನೋಂದಣಿಯಾಗಿರುವುದಿಲ್ಲ ಎಂದರೆ ಸರಿ.

10. ನಾನು ನಿಪಿ- 1 ನ್ನು ಎಲ್ಲಾ ನೋಂದಣಾಧಿಕಾರಿಗಳಿಗೆ ಸ್ವತಃ ದಾಖಲೆಯನ್ನು ಹಾಜರುಪಡಿಸಿ ಬಾಕಿ ಮುದ್ರಣಾಂಕ ಶುಲ್ಕ ಮತ್ತು ಡಂಡವನ್ನು ಪಾವತಿಸಿರುತ್ತೇನೆ. ಈ ವರೆಗೂ ರಾಜಿ ಯಾಗದ ಕಾರಣ ಬಾಕಿ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದೇ ಹಣದಲ್ಲಿಯೇ ತೀರ್ಮಾನ ಮಾಡಬೇಕೆಂದು ಮಾತು ಕತೆಯಾಗಿರುತ್ತದೆ ಎಂದು ಉತ್ತರಿಸುತ್ತಾರೆ. ನನಗೂ ಮತ್ತು ಪ್ರತಿವಾದಿಗೆ ದಾವಾ ಆಸ್ತಿಗಳ ಸಂಬಂಧ ಯಾವತ್ತೂ ಕ್ರಯದ ಕರಾರು ಪತ್ರ ಅಗಿರುವುದಿಲ್ಲ ಹಾಗೂ ನಿಪಿ- 1 ನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ನಿಪಿ- 1 ರ ಆಧಾರದ ಮೇಲೆ ಕ್ರಯ ಪತ್ರ ಬರೆದುಕೊಡುವಂತೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ